# ಕರ್ನಾಟಕ ಲೋಕಾಯುಕ್ತ

**ಸಂ.ಕಂಪ್ಲೆಂಟ್/ಉಪಲೋಕ್/ಬಿಸಿಡಿ/1029/2021**
**ಪಿಓ/ಎ.ಅರ್.ಇ-2 (ಮಂಡನಾಧಿಕಾರಿಗಳ ಶಾಖೆ)**

ಬಹುಮಹಡಿಗಳ ಕಟ್ಟಡ,
ಡಾ|| ಬಿ.ಆರ್.ಅಂಬೇಡ್ಕರ ರಸ್ತೆ,
ಬೆಂಗಳೂರು, ದಿನಾಂಕ: 02/11/2021.

## ಕರ್ನಾಟಕ ಲೋಕಾಯುಕ್ತ ಕಾಯಿದೆ 1984ರ ಕಲಂ 12(3)ರ ಅನ್ವಯ ವರದಿ

ವಿಷಯ: ಸರ್ಕಾರಿ ನೌಕರರಾದ ಬೆಂಗಳೂರು ಜಿಲ್ಲೆ, ಆನೇಕಲ್ ತಾಲ್ಲೂಕು, ಕಸಬಾ 2 ಹೋಬಳಿ, ರಾಚಮಾನಹಳ್ಳಿಯ, ಗ್ರಾಮ ಲೆಕ್ಕಾಧಿಕಾರಿ ಶ್ರೀ. ಪಿ. ಶಿವಣ್ಣ ಬಿನ್ ಲೇಟ್ ಪುಟ್ಟಣ್ಣ, ರವರು ಕರ್ತವ್ಯ ಲೋಪ/ದುರ್ನಡತೆ ಎಸಗಿರುವ ಬಗ್ಗೆ.

******

1. ಮಾನ್ಯ ಪೋಲಿಸ್ ಅಧೀಕ್ಷಕರು, ಭ್ರಷ್ಟಾಚಾರ ನಿಗ್ರಹ ದಳ, ಕೇಂದ್ರ ವಲಯ, ಬೆಂಗಳೂರು, ಇವರು ಪೋಲಿಸ್ ನಿರೀಕ್ಷಕರು ಭ್ರಷ್ಟಾಚಾರ ನಿಗ್ರಹ ದಳ, ಬೆಂಗಳೂರು ಜಿಲ್ಲೆ, (ಇನ್ನು ಮುಂದೆ "ತನಿಖಾಧಿಕಾರಿ" ಎಂದು ಕರೆಯಲ್ಪಡುತ್ತಾರೆ), ಇವರ ತನಿಖಾ ವರದಿ ಮತ್ತು ಸಂಬಂಧಿಸಿದ ದಾಖಲೆಗಳೊಂದಿಗೆ ವರದಿಯನ್ನು ಸಲ್ಲಿಸಿದ್ದು, ಸದರಿ ವರದಿಯಲ್ಲಿ ಶ್ರೀ. ಪಿ. ಶಿವಣ್ಣ ಬಿನ್ ಲೇಟ್ ಪುಟ್ಟಣ್ಣ, ಗ್ರಾಮ ಲೆಕ್ಕಾಧಿಕಾರಿ, ರಾಚಮಾನಹಳ್ಳಿ, ಕಸಬಾ 2 ಹೋಬಳಿ, ಆನೇಕಲ್ ತಾಲ್ಲೂಕು, ಬೆಂಗಳೂರು ಜಿಲ್ಲೆ, (ಇನ್ನು ಮುಂದೆ "ಎದುರುದಾರರು" ಎಂದು ಕರೆಯಲ್ಪಡುತ್ತಾರೆ), ರವರು ದೂರುದಾರರಾದ ಶ್ರೀ. ನಾರಾಯಣಪ್ಪ ಎಮ್. ಬಿನ್ ಲೇಟ್ ಮೊಟ್ಟೆಪ್ಪ, ಬೆಸ್ತಮಾನ ಹಳ್ಳಿ, ಕಸಬಾ ಹೋಬಳಿ, ಆನೇಕಲ್ ತಾಲ್ಲೂಕು, ಬೆಂಗಳೂರು ಜಿಲ್ಲೆ, (ಇನ್ನು ಮುಂದೆ "ದೂರುದಾರರು" ಎಂದು ಕರೆಯಲ್ಪಡುತ್ತಾರೆ), ರವರಿಂದ ಸರ್ಕಾರಿ ಕೆಲಸಕ್ಕೆ ಲಂಚದ ಹಣವನ್ನು ಪಡೆದು ಕರ್ತವ್ಯ ಲೋಪವೆಸಗಿರುವುದು ಮೇಲ್ನೋಟಕ್ಕೆ ಕಂಡು ಬಂದಿದ್ದರಿಂದ, ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ರ ಕಲಂ 7(2) ರನ್ವಯ ಗೌರವಾನ್ವಿತ ಉಪಲೋಕಾಯುಕ್ತರು ಸ್ವಯಂ ಪ್ರೇರಿತ ದೂರು ದಾಖಲಿಸಿಕೊಂಡು ತನಿಖೆ ತೆಗೆದುಕೊಂಡಾಗ, ಈ ಕೆಳಗೆ ಹೇಳಿದ ಸಂಗತಿಗಳು ಮೇಲ್ನೋಟಕ್ಕೆ ಕಂಡು ಬರುತ್ತದೆ.

i. ದೂರುದಾರರು ವ್ಯವಸಾಯವನ್ನು ಮಾಡಿಕೊಂಡು ಬೆಸ್ತಮಾನಹಳ್ಳಿ ಗ್ರಾಮದಲ್ಲಿ ವಾಸವಾಗಿದ್ದು, ಅವರ ತಂದೆಯವರು 2005ನೇ ಇಸವಿಯಲ್ಲಿ ನಿಧನರಾಗಿದ್ದು, ಅವರ ಹೆಸರಿನಲ್ಲಿದ್ದ ಆಸ್ತಿಗಳನ್ನು ದೂರುದಾರರ ಹೆಸರಿಗೆ ಪೌತಿ ಖಾತೆ ಮಾಡಲು ಕುಟುಂಬದ ಇತರ ಎಲ್ಲಾ ಸದಸ್ಯರುಗಳು ಒಪ್ಪಿಕೊಂಡಿದ್ದು, ಅದರಂತೆ ದೂರುದಾರರ ತಂದೆಯ ಹೆಸರಿನಲ್ಲಿದ್ದ

ಬೆಸ್ತಮಾನ ಹಳ್ಳಿ ಗ್ರಾಮದ ಸರ್ವೆ ನಂ. 167/04 ರಲ್ಲಿಯ 12 ಗುಂಟೆ ಖುಷ್ಕಿ ಜಮೀನಿನ ಪೌತಿ ಖಾತೆಯನ್ನು ದೂರುದಾರರ ಹೆಸರಿಗೆ ಮಾಡಿಸಿಕೊಳ್ಳಲು ಆನೇಕಲ್ ತಹಶೀಲ್ದಾರವರಲ್ಲಿ ಎಲ್ಲಾ ದಾಖಲಾತಿಗಳನ್ನು ಲಗತ್ತಿಸಿ ಅರ್ಜಿ ಸಲ್ಲಿಸಿರುತ್ತಾರೆ. ತದನಂತರ ತಹಶೀಲ್ದಾರವರು ದೂರುದಾರರ ತಾಯಿ, ಅಣ್ಣಂದಿರು ಮತ್ತು ಅಕ್ಕರವರ ಹೇಳಿಕೆಗಳನ್ನು ಪಡೆದುಕೊಂಡು, ಮುಂದಿನ ವರದಿಯನ್ನು ನೀಡುವ ಸಲುವಾಗಿ ಗ್ರಾಮ ಲೆಕ್ಕಾಧಿಕಾರಿಯಾದ ಎದುರುದಾರರಿಗೆ ಆದೇಶಿಸಿದ್ದು, ಎದುರುದಾರರು ಹಲವು ದಿನಗಳವರೆಗೆ ಕಡತವನ್ನು ತಮ್ಮ ಬಳಿಯೇ ಇಟ್ಟುಕೊಂಡು, ದೂರುದಾರರು ಎದುರುದಾರರನ್ನು ಭೇಟಿಯಾಗಲಿಲ್ಲವೆಂಬ ಕಾರಣದಿಂದಾಗಿ, ದೂರುದಾರರಿಗೆ ಪ್ರತಿಕೂಲವಾಗುವಂತೆ ಎದುರುದಾರರು ಷರಾ ಬರೆದಿದ್ದು, ದೂರುದಾರರು ಎದುರುದಾರರನ್ನು ಭೇಟಿ ಮಾಡಿ ವಿಚಾರಿಸಲಾಗಿ, ಎದುರುದಾರರು ದೂರುದಾರರ ಅಕ್ಕನವರ ಚುನಾವಣಾ ಗುರುತಿನ ಚೀಟಿಯನ್ನು ನೀಡುವಂತೆ ಸೂಚಿಸಿದ್ದು, ಅದರಂತೆ ದೂರುದಾರರು ಚುನಾವಣಾ ಗುರುತಿನ ಚೀಟಿಯನ್ನು ಒದಗಿಸಿದ್ದರು ಸಹಾ ಎದುರುದಾರರು ಅವರ ವರದಿಯನ್ನು ನೀಡದೆ ವಿಳಂಬ ಮಾಡಿರುತ್ತಾರೆ. ಈ ಬಗ್ಗೆ ದೂರುದಾರರು ಎದುರುದಾರರನ್ನು ದೂರವಾಣಿ ಮೂಲಕ ಸಂಪರ್ಕಿಸಿ, ನಂತರ ನೇರವಾಗಿ ಭೇಟಿ ಮಾಡಿ ವಿಚಾರಿಸಿದಾಗ ರೂ. 15,000/- ಗಳ ಲಂಚದ ಹಣಕ್ಕೆ ಬೇಡಿಕೆಯಿಟ್ಟಿರುತ್ತಾರೆ. ದಿ: 22-11-2016 ರಂದು ಮಧ್ಯಾಹ್ನ ಸುಮಾರು 2.00 ಗಂಟೆಗೆ ಎದುರುದಾರರು ತಮ್ಮ ಮೊಬೈಲ್ ಸಂ: 8550073606ನೇದ್ದರಿಂದ ದೂರುದಾರರ ಮೊಬೈಲ್ ಸಂ: 9731133747 ನೇದ್ದಕ್ಕೆ ಕರೆ ಮಾಡಿ, ತಮ್ಮ ಕಛೇರಿಗೆ ಬರುವಂತೆ ಸೂಚಿಸಿದ್ದು, ಅದರಂತೆ ದೂರುದಾರರು ಅದೇ ದಿನ ಸಂಜೆ 5.00 ಗಂಟೆಗೆ ಆನೇಕಲ್ ಟೌನ್ ಚೌಡಯ್ಯ ಸರ್ಕಲ್ ನಲ್ಲಿರುವ ಎದುರುದಾರರ ಕಛೇರಿಗೆ ಬಂದು ಭೇಟಿ ಮಾಡಿದಾಗ ರೂ. 10,000/- ಗಳಿಗೆ ಬೇಡಿಕೆಯಿಟ್ಟಿರುತ್ತಾರೆ. ಈ ಸಮಯದಲ್ಲಿ ಎದುರುದಾರರು ಮತ್ತು ದೂರುದಾರರ ಮಧ್ಯೆ ನಡೆದ ಸಂಭಾಷಣೆಯನ್ನು ದೂರುದಾರರು ಅವರ ಮೊಬೈಲ್ ನಲ್ಲಿ ಧ್ವನಿ ಮುದ್ರಿಸಿಕೊಂಡಿರುತ್ತಾರೆ.

ii. ದಿ: 23-11-2016 ರಂದು ಮಧ್ಯಾಹ್ನ 2.00 ಗಂಟೆಗೆ ದೂರುದಾರರಿಗೆ ಲಂಚದ ಹಣ ಕೊಡಲು ಇಷ್ಟವಿಲ್ಲದೆ ಇದ್ದುದ್ದರಿಂದ ತನಿಖಾಧಿಕಾರಿಗಳನ್ನು ಭೇಟಿ ಮಾಡಿ ದೂರು ನೀಡಿದ್ದು, ಅದರ ಆಧಾರದ ಮೇಲೆ ಬೆಂಗಳೂರು ಜಿಲ್ಲೆ ಎಸಿಬಿ ಪೋಲಿಸ್ ಠಾಣೆ ಮೊ.ಸಂ. 06/2016 ರಲ್ಲಿ ಕಲಂ 7

ಭ್ರಷ್ಟಾಚಾರ ನಿಗ್ರಹ ಕಾಯ್ದೆ (ತಿದ್ದುಪಡಿ) 1988 ರ ಅಡಿ ಪ್ರಕರಣ ದಾಖಲಿಸಿರುತ್ತಾರೆ.

iii. ಪ್ರಕರಣ ದಾಖಲಾದ ನಂತರ ತನಿಖಾಧಿಕಾರಿಗಳು ಸರ್ಕಾರಿ ಪಂಚರುಗಳಾದ 1) ಶ್ರೀ ವಿ. ಸೆಂದಿಲ್ ಕುಮಾರ್, 2) ಶ್ರೀ ಅಂಬರೀಶ (ನೆರಳು ಸಾಕ್ಷಿ) ಇವರುಗಳನ್ನು ಬರಮಾಡಿಕೊಂಡಿದ್ದು, ಸದರಿಯವರ ಸಮಕ್ಷಮ ದೂರುದಾರರು ಅವರ ಮೊಬೈಲ್‌ನ್ನು ಹಾಜರು ಪಡಿಸಿದ್ದು, ಮೊಬೈಲ್‌ನ ಮೆಮೊರಿ ಕಾರ್ಡನಲ್ಲಿದ್ದ ಸಂಭಾಷಣೆಯನ್ನು ಲ್ಯಾಪ್ ಟಾಪ್‌ಗೆ ಹಾಕಿ ನಂತರ ಲ್ಯಾಪ್ ಟಾಪ್‌ನಿಂದ ಒಂದು ಸಿಡಿಗೆ ಸಂಭಾಷಣೆಯನ್ನು ವರ್ಗಾಯಿಸಿಕೊಂಡಿರುತ್ತಾರೆ. ಸದರಿ ಸಂಭಾಷಣೆಯನ್ನು ಪಂಚರಿಗೆ ಕೇಳಿಸಲಾಗಿ, ಎದುರುದಾರರು ಲಂಚಕ್ಕಾಗಿ ಬೇಡಿಕೆ ಇಟ್ಟಿರುವುದು ಕಂಡು ಬರುತ್ತದೆ. ಲಂಚ ನೀಡಲು ತಂದ (ರೂ. 2,000/- ಮುಖಬೆಲೆಯ 04-ನೋಟುಗಳು ಮತ್ತು 500/- ಮುಖಬೆಲೆಯ 04-ನೋಟುಗಳು) ಒಟ್ಟು 10,000/- ರೂ.ಗಳನ್ನು ದೂರುದಾರರು ತನಿಖಾಧಿಕಾರಿಗಳ ಮುಂದೆ ಹಾಜರು ಪಡಿಸಿದ್ದು, ಸದರಿ ನೋಟುಗಳ ನಂ.ಗಳನ್ನು ಪಂಚರು ಹಾಳೆಯಲ್ಲಿ ಬರೆದುಕೊಂಡಿರುತ್ತಾರೆ. ಪೋಲೀಸ್ ಸಿಬ್ಬಂದಿ ಸದರಿ ನೋಟುಗಳಿಗೆ ಫಿನಾಫ್ಥಲೀನ್ ಪೌಡರನ್ನು ಸವರಿ ಸದರಿ ಹಣವನ್ನು ಪಂಚ ಸಾಕ್ಷಿ-2ರವರ ಮೂಲಕ ದೂರುದಾರರ ಧರಿಸಿದ್ದ ಜೀನ್ಸ್ ಪ್ಯಾಂಟಿನ ಬಲಭಾಗದ ಹಿಂಭಾಗದ ಜೇಬಿನಲ್ಲಿ ಇಡಿಸಿರುತ್ತಾರೆ. ನಂತರ ತನಿಖಾಧಿಕಾರಿಗಳು ಪಂಚ ಸಾಕ್ಷಿ-2 ರವರ ಎರಡೂ ಕೈಗಳನ್ನು ಸೋಡಿಯಮ್ ಕಾರ್ಬೋನೇಟ್ ದ್ರಾವಣದಲ್ಲಿ ಪ್ರತ್ಯೇಕವಾಗಿ ತೊಳೆಸಲಾಗಿ, ದ್ರಾವಣವು ಗುಲಾಬಿ ಬಣ್ಣಕ್ಕೆ ತಿರುಗಿದ್ದು, ಫಿನಾಫ್ಥಲೀನ್ ಪೌಡರನ ವೈಶಿಷ್ಟತೆಯನ್ನು ದೂರುದಾರರು ಹಾಗೂ ಪಂಚರಿಗೆ ಮನವರಿಕೆ ಮಾಡಿಕೊಟ್ಟಿರುತ್ತಾರೆ. ನೆರಳು ಸಾಕ್ಷಿಯಾದ ಪಂಚ-1 ರವರಿಗೆ ದೂರುದಾರರೊಂದಿಗೆ ಲಂಚವನ್ನು ನೀಡುವ ಕಾಲಕ್ಕೆ ನಡೆಯುವ ಸಂಭಾಷಣೆ ಹಾಗೂ ವಿದ್ಯಾಮಾನಗಳನ್ನು ಗಮನಿಸಬೇಕೆಂದು ಸೂಚನೆ ನೀಡಿರುತ್ತಾರೆ. ದೂರುದಾರರಿಗೆ ಹಣವನ್ನು ಅನಗತ್ಯವಾಗಿ ಮುಟ್ಟದಂತೆ, ಬೇರೆ ಯಾವುದಕ್ಕೂ ಬಳಸದಂತೆ ತಿಳಿಸಿ, ಎದುರುದಾರರು ಲಂಚದ ಹಣವನ್ನು ಕೇಳಿದಾಗ ಮಾತ್ರ ಕೊಡುವಂತೆ ಮತ್ತು ಲಂಚದ ಹಣವನ್ನು ಸ್ವೀಕರಿಸಿದ ನಂತರ ಹೊರಗಡೆ ಬಂದು ತಮ್ಮ ಬಳಿಯಲ್ಲಿರುವ ಮೊಬೈಲ್‌ನ್ನು ಕಿವಿಯ ಬಳಿ ಇಟ್ಟುಕೊಳ್ಳುವ ಮೂಲಕ ಸನ್ನೆ ಮಾಡಬೇಕೆಂದು ತಿಳಿಸಿರುತ್ತಾರೆ.

iv. ಅದೇ ದಿನ ಸಂಜೆ 5.20 ಗಂಟೆಗೆ ದೂರುದಾರರು ಎದುರುದಾರರು ಕೆಲಸ ಮಾಡುತ್ತಿದ್ದ ಆನೇಕಲ್ ಪಟ್ಟಣದ ಅತ್ತಿಬೆಲೆ ಮುಖ್ಯ ರಸ್ತೆಯಲ್ಲಿ (ಯಲ್ಲಮ್ಮ ದೇವಸ್ಥಾನ ರಸ್ತೆ) ನಟರಾಜ ಬಿಲ್ಡಿಂಗ್‌ನ ಮೊದಲನೇ ಮಹಡಿಯಲ್ಲಿರುವ ಎದುರುದಾರರ ಖಾಸಗಿ ಕಛೇರಿಗೆ ನೆರಳು ಸಾಕ್ಷಿಯಾದ ವಿ. ಸೆಂದೀಲಕುಮಾರ್ ರವರೊಂದಿಗೆ ಬಂದು ಭೇಟಿಯಾಗಿ ದೂರುದಾರರ ಖಾತೆಯ ಬಗ್ಗೆ ವಿಚಾರಿಸಿದಾಗ, ಎದುರುದಾರರು ಕಡತವನ್ನು ರೆಡಿಮಾಡಿರುವುದಾಗಿ ತಿಳಿಸಿ, ಅವರ ಬೀರುವಿನಿಂದ ಕಡತವನ್ನು ತೆಗೆದು ತೋರಿಸಿ, ಆರ್.ಐ. ರವರ ಕಡೆಯಿಂದ ಕಳುಹಿಸಬೇಕಾಗಿದೆಯೆಂದು ತಿಳಿಸಿದಾಗ, ದೂರುದಾರರು ತನಗೇ ನೀಡಿದಲ್ಲಿ ತಾನು ಆರ್.ಐ.ರವರಿಂದ ಕೆಲಸ ಮಾಡಿಸುವುದಾಗಿ ತಿಳಿಸಿದಾಗ, ಎದುರುದಾರರು ತಾನೇ ಮಾಡಿಸುವುದಾಗಿ ತಿಳಿಸಿ, ಲಂಚದ ಹಣಕ್ಕೆ ವಿಚಾರಿಸಿದ್ದು, ಆಗ ದೂರುದಾರರು ಲಂಚದ ಹಣವನ್ನು ತಂದಿರುವುದಾಗಿ ತಿಳಿಸಿ, ತನ್ನ ಬಳಿಯಿದ್ದ ಫಿನಾಫ್ತಲೀನ್ ಲೇಪಿತ ಹಣವನ್ನು ಎದುರುದಾರರಿಗೆ ನೀಡಿದಾಗ, ಎದುರುದಾರರು ಬಲಗೈಯಿಂದ ಪಡೆದುಕೊಂಡು ಎರಡು ಕೈಗಳಿಂದ ಎಣಿಸಿ, ತಮ್ಮ ಟೇಬಲ್ ಮೇಲೆ ಇದ್ದ ಒಂದು ಬಿಳಿ ಹಾಳೆಯಲ್ಲಿ ಹಣವನ್ನು ಸುತ್ತಿ ಟೇಬಲ್ ಮೇಲೆ ಇಟ್ಟುಕೊಂಡಿರುತ್ತಾರೆ. ನಂತರ ದೂರುದಾರರು ಹೊರಗಡೆ ಬಂದು ತಮ್ಮ ಬಳಿಯಲ್ಲಿರುವ ಮೊಬೈಲ್‌ನ್ನು ಕಿವಿಯ ಬಳಿ ಇಟ್ಟುಕೊಳ್ಳುವ ಮೂಲಕ ಸನ್ನೆ ಮಾಡಿರುತ್ತಾರೆ.

v. ಆ ಸಂದರ್ಭದಲ್ಲಿ ದೂರುದಾರರು ತನಿಖಾಧಿಕಾರಿಗಳಿಗೆ ಸನ್ನೆ ಮಾಡಿದ ತಕ್ಷಣ ತನಿಖಾಧಿಕಾರಿ ತಮ್ಮ ಸಿಬ್ಬಂದಿ ಮತ್ತು ಪಂಚರೊಂದಿಗೆ ಎದುರುದಾರರ ಖಾಸಗಿ ಕಛೇರಿಯನ್ನು ಪ್ರವೇಶಿಸಿ, ತಮ್ಮ ಗುರುತಿನ ಚೀಟಿಯನ್ನು ತೋರಿಸಿ ಪರಿಚಯ ಹೇಳಿ, ಎದುರುದಾರರ ಮೇಲೆ ಪ್ರಕರಣ ದಾಖಲಾಗಿರುವ ವಿಚಾರ ತಿಳಿಸಿ, ತನಿಖೆಗೆ ಸಹಕರಿಸುವಂತೆ ಹೇಳಿ, ತನಿಖಾಧಿಕಾರಿಗಳು ಎದುರುದಾರರ ಎರಡೂ ಕೈಗಳನ್ನು ಸೋಡಿಯಮ್ ಕಾರ್ಬೋನೇಟ್ ದ್ರಾವಣದಲ್ಲಿ ಪ್ರತ್ಯೇಕವಾಗಿ ತೊಳೆಸಲಾಗಿ, ದ್ರಾವಣವು ಗುಲಾಬಿ ಬಣ್ಣಕ್ಕೆ ತಿರುಗಿರುತ್ತದೆ. ನಂತರ ತನಿಖಾಧಿಕಾರಿಗಳು ದೂರುದಾರರಿಂದ ಕೇಳಿ ಪಡೆದುಕೊಂಡಿರುವ ಲಂಚದ ಹಣ ಬಗ್ಗೆ ಎದುರುದಾರರನ್ನು ಕೇಳಲಾಗಿ, ಎದುರುದಾರರು ಕುಳಿತುಕೊಂಡಿರುವ ಟೇಬಲ್ ಮೇಲೆ ಎಡಭಾಗದಲ್ಲಿ ಒಂದು ಬಿಳಿ ಪೇಪರ್ ನಲ್ಲಿ ಸುತ್ತಿ ಮುಚ್ಚಿ ಇಟ್ಟಿರುವುದಾಗಿ ತಿಳಿಸಿ ಅಲ್ಲಿ ಇದ್ದ ಹಣವನ್ನು ತೋರಿಸಿದಾಗ, ತನಿಖಾಧಿಕಾರಿಗಳು ಪಂಚ–2ರವರಿಗೆ ಸೂಚಿಸಿ ಟೇಬಲ್‌ನ ಮೇಲೆ ಎಡಭಾಗದಲ್ಲಿಟ್ಟಿದ್ದ ಪೇಪರನಲ್ಲಿಯ ಹಣವನ್ನು ತೆಗೆಯಿಸಿದ್ದು, ಸದರಿ

ನೋಟುಗಳು ಪ್ರಾಯೋಗಿಕ ಪಂಚನಾಮೆಯ ಕಾಲಕ್ಕೆ ಬರೆದಿಟ್ಟುಕೊಂಡತಹ ನೋಟುಗಳ ಕ್ರಮ ಸಂಖ್ಯೆಗಳಿಗೆ ತಾಳೆಯಾಗಿರುತ್ತದೆ ಮತ್ತು ಎದುರುದಾರರು ಈ ಬಗ್ಗೆ ಯಾವುದೇ ಸಮಂಜಸವಾದ ಉತ್ತರವನ್ನು ನೀಡಿರುವುದಿಲ್ಲ. ಸದರಿ ಹಣವನ್ನು ತನಿಖಾಧಿಕಾರಿಗಳು ಅವರ ವಶಕ್ಕೆ ಪಡೆದುಕೊಂಡು ಕವರ್ ನಲ್ಲಿ ಹಾಕಿ ಸೀಲ್ ಮಾಡಿರುತ್ತಾರೆ.

vi. ನಂತರ ತನಿಖಾಧಿಕಾರಿಗಳು ಎದುರುದಾರರಿಗೆ ದೂರುದಾರರಿಂದ ಪಡೆದ ಲಂಚದ ಹಣದ ಬಗ್ಗೆ ವಿವರಣೆಯನ್ನು ನೀಡುವಂತೆ ಸೂಚಿಸಿದಾಗ, ಎದುರುದಾರರು ತಮ್ಮ ಸಮಜಾಯಿಷಿಯನ್ನು ನೀಡಿದ್ದು, ಅದರಲ್ಲಿ ಎದುರುದಾರರು "ಸ್ವಾಮಿ, ಬೆಸ್ತಮಾನಹಳ್ಳಿ ಪೌತಿ ಖಾತೆಗೆ ಸಂಬಂಧಿಸಿದಂತೆ ಶ್ರೀ. ನಾರಾಯಣಸ್ವಾಮಿಯವರು ಪದೇ ಪದೇ ಫೋನ್ ಮಾಡಿ ನಿಮಗೆ ಎಷ್ಟು ಹಣ ಬೇಕು ಕೇಳಿ ಎಂದು ಕೇಳುತ್ತಿದ್ದರು. ಆದರೆ ನಾನು ಯಾವುದೇ ರೀತಿ ಯಾವ ಹಣವನ್ನು ಕೇಳಲಿಲ್ಲ. ಅವರ ಖಾತೆಗೆ ಸಂಬಂಧಿಸಿದಂತೆ ಯಾವ ಫೈಲ್ ಸಹ ನನ್ನ ಹತ್ತಿರ ಬ್ಯಾಲೆನ್ಸ್ ಇಡದೆ ಅವರ ಕೆಲಸವನ್ನು ಮಾಡಿ ಮುಗಿಸಿರುತ್ತೇನೆ. ಅವರ ಪಹಣಿ ಸಹಾ ಬಂದಿರುತ್ತೆ. ಶ್ರೀ. ನಾರಾಯಣ ಸ್ವಾಮಿಯವರ ಹತ್ತಿರ ಯಾವ ಹಣವನ್ನು ನಾನು ತೆಗೆದುಕೊಂಡಿಲ್ಲ ಹಾಗೂ ಅದರ ಬಗ್ಗೆ ಸಹಾ ಮಾತಾಡಿಲ್ಲ ದಿನಾಂಕ:23/11/2016 ರಂದು ಸಂಜೆ 5–15 ನಿಮಿಷದಲ್ಲಿ ಬಂದು ನನ್ನ ಟೇಬಲ್ ಹತ್ತಿರ ಪೇಪರ್‌ನಲ್ಲಿ ಹಣವನ್ನು ಸುತ್ತಿ ಇಟ್ಟಿರುತ್ತಾರೆ ಅದನ್ನು ನಾನು ನೋಡಲಿಲ್ಲ ಮುಟ್ಟಲಿಲ್ಲ ಅದು ನನಗೆ ಗೊತ್ತಿಲ್ಲ ಸಾರ್, ತಕ್ಷಣ ಪೋಲೀಸ್ ಸಾಹೇಬ್ರು ಬಂದು ನಿಮ್ಮ ಹತ್ತಿರ ಹಣ ಎಂದಾಗ ಆಗ ಅವರು ಹೇಳಿದಾಗ ಟೇಬಲ್ ಮುಂದೆ ಪೇಪರ್‌ನಲ್ಲಿ ಸುತ್ತಿ ಇಟ್ಟಿದ್ದರು ನಾರಾಯಣಸ್ವಾಮಿಯವರು ಹಾಗೂ ಅದನ್ನು ಅವರು ಹೇಳಿದಾಗ ನೋಡಿದೆವು ಇಷ್ಟೆ ಸ್ವಾಮಿ ನಡೆದ ವಿಷಯ ದಯವಿಟ್ಟು ನಾನು ಆ ಹಣವನ್ನು ಮುಟ್ಟಲಿಲ್ಲ ನೋಡಲಿಲ್ಲ ಸ್ವಾಮಿ" ಎಂದು ಸಮಜಾಯಿಷಿಯನ್ನು ನೀಡಿರುತ್ತಾರೆ. ಎದುರುದಾರರು ನೀಡಿದ ಸಮಜಾಯಿಷಿಯ ಬಗ್ಗೆ ತನಿಖಾಧಿಕಾರಿಗಳು ದೂರುದಾರರನ್ನು ವಿಚಾರಿಸಿದಾಗ, ಅವರು ಎದುರುದಾರರ ಹೇಳಿಕೆಯ ಸತ್ಯಕ್ಕೆ ದೂರವಾಗಿದ್ದು, ಎದುರುದಾರರು ಪೌತಿ ಖಾತೆ ಸಂಬಂದ ತಮ್ಮ ವರದಿಯನ್ನು ನೀಡಲು ಲಂಚದ ಹಣಕ್ಕೆ ಬೇಡಿಕೆಯಿಟ್ಟು ಅದರಂತೆ ಪಡೆದುಕೊಂಡಿರುವುದಾಗಿ ತಿಳಿಸಿರುತ್ತಾರೆ. ನಂತರ ತನಿಖಾಧಿಕಾರಿಗಳು ಎದುರುದಾರರು ನೀಡಿದ ಸಮಜಾಯಿಷಿಯ ಬಗ್ಗೆ ನೆರಳುಸಾಕ್ಷಿಯವರನ್ನು ವಿಚಾರಿಸಿದಾಗ, ಅವರು ಎದುರುದಾರರು ಲಂಚದ ಹಣವನ್ನು ದೂರುದಾರರಿಂದ ಕೇಳಿ ಪಡೆದುಕೊಂಡಿರುವುದಾಗಿ ದೃಢಪಡಿಸಿರುತ್ತೇನೆ ಎಂದು ಹೇಳಿರುತ್ತಾರೆ. ನಂತರ

ತನಿಖಾಧಿಕಾರಿಗಳು ದೂರುದಾರರಿಗೆ ಸಂಬಂಧ ಪಟ್ಟ ಕಡತವನ್ನು ಹಾಜರುಪಡಿಸುವಂತೆ ಎದುರುದಾರರಿಗೆ ತಿಳಿಸಿದಾಗ, ಎದುರುದಾರರು ಅವರ ಕೋಣೆಯಲ್ಲಿರುವ ಟೇಬಲ್ ಮೇಲಿದ್ದ ಕಡತವನ್ನು ಹಾಜರುಪಡಿಸಿದ್ದು, ಆ ಕಾಗದಪತ್ರಗಳ ಪ್ರತಿಗಳನ್ನು ಎದುರುದಾರರ ಮೇಲಾಧಿಕಾರಿಯಾದ ಶ್ರೀ. ಕೃಷ್ಣಯ್ಯ, ಆರ್. ಉಪ–ತಹಶೀಲ್ದಾರ್, ನಾಡಕಚೇರಿ, ಜಿಗಣಿ ಹೋಬಳಿ, ರವರಿಂದ ಧೃಡೀಕರಿಸಿಕೊಂಡು ವಶಕ್ಕೆ ಪಡೆದಿರುತ್ತಾರೆ. ನಂತರ ತನಿಖಾಧಿಕಾರಿಗಳು ಎದುರುದಾರರನ್ನು ದಸ್ತಗಿರಿ ಮಾಡಿದ್ದು, ಅದನ್ನು ಎದುರುದಾರರ ಮೇಲಾಧಿಕಾರಿಯಾದ ಶ್ರೀ ಕೃಷ್ಣಯ್ಯ, ಆರ್. ಉಪ–ತಹಶೀಲ್ದಾರ್, ನಾಡಕಚೇರಿ, ಜಿಗಣಿ ಹೋಬಳಿ, ರವರಿಗೆ ನೋಟೀಸ್ ನೀಡುವ ಮೂಲಕ ತಿಳಿಸಿರುತ್ತಾರೆ.

vii. ನಂತರ ತನಿಖಾಧಿಕಾರಿಗಳು ಮಾದರಿ ಧ್ವನಿ ಸಂಗ್ರಹಿಸುವ ಅವಶ್ಯಕತೆಯಿದ್ದು, ಟ್ರ್ಯಾಪ್ ಪೂರ್ವದಲ್ಲಿ ಮತ್ತು ಟ್ರ್ಯಾಪ್ ಸಮಯದಲ್ಲಿ ನಡೆಸಿದ ಸಂಭಾಷಣೆಯನ್ನು ಓದಲು ಪ್ರತಿಲೇಖವನ್ನು ತಯಾರಿಸಿದ್ದು, ಅದನ್ನು ಎದುರುದಾರರಿಂದ ಹಾಗೂ ದೂರುದಾರರಿಂದ ಮೂರು ಮೂರು ಬಾರಿ ಓದಿಸಿ, ವಾಯ್ಸ್ ರೆಕಾರ್ಡ್‌ನಲ್ಲಿ ರೆಕಾರ್ಡ್ ಮಾಡಿಕೊಂಡಿದ್ದು, ಅದನ್ನು ಲ್ಯಾಪ್ ಟಾಪ್‌ಗೆ ಡೌನ್ ಲೋಡ್ ಮಾಡಿಕೊಂಡು ಪ್ರತ್ಯೇಕ ಸಿಡಿಗಳನ್ನು ತಯಾರಿಸಿರುತ್ತಾರೆ. ಈ ಎಲ್ಲಾ ಪ್ರಕ್ರಿಯೆಗಳನ್ನು ತನಿಖಾಧಿಕಾರಿಗಳು ದಿ.23/11/2016ರಂದು ಬೆಂಗಳೂರು ನಗರ ಜಿಲ್ಲೆ, ಆನೇಕಲ್ ತಾಲ್ಲೂಕು, ಅತ್ತಿಬೆಲೆ ಮುಖ್ಯ ರಸ್ತೆ, (ಯಲ್ಲಮ್ಮ ದೇವಸ್ಥಾನ ರಸ್ತೆ) ನಟರಾಜ ಬಿಲ್ಡಿಂಗ್‌ನ 1ನೇ ಮಹಡಿಯಲ್ಲಿರುವ ಎದುರುದಾರರ ಖಾಸಗಿ ಕಚೇರಿಯಲ್ಲಿ ಸಂಜೆ 05–00 ಗಂಟೆಯಿಂದ ರಾತ್ರಿ 08–30 ಗಂಟೆಯವರೆಗೆ ತನಿಖಾಧಿಕಾರಿಗಳು ಟ್ರಾಪ್ ಮಹಜರ್‌ನ್ನು ಲ್ಯಾಪ್ ಟಾಪ್‌ನಲ್ಲಿ ಟೈಪ್ ಮಾಡಿಸಿರುತ್ತಾರೆ.

viii. ಆಗ ಸದರಿ ಎದುರುದಾರರಿಂದ ದೊರೆತ ಹಣವನ್ನು ಜಪ್ತ ಮಾಡಿಕೊಂಡು ಪಂಚರ ಸಮಕ್ಷಮ ತನಿಖಾಧಿಕಾರಿಗಳು ಪಂಚನಾಮೆ ಜರುಗಿಸಿರುತ್ತಾರೆ ಹಾಗೂ ಎದುರುದಾರರನ್ನು ದಸ್ತಗಿರಿ ಮಾಡಿರುತ್ತಾರೆ. ತನಿಖಾಧಿಕಾರಿಗಳು ಸಂಪೂರ್ಣ ತನಿಖೆಯನ್ನು ಪೂರೈಸಿ, ಅಭಿಯೋಜನಾ ಮಂಜೂರಾತಿಯನ್ನು ಪಡೆದು ಮಾನ್ಯ ನ್ಯಾಯಾಲಯಕ್ಕೆ ದೋಷಾರೋಪಣಾ ಪಟ್ಟಿ ಸಲ್ಲಿಸಿರುತ್ತಾರೆ.

ix. ಧ್ವನಿ ವಿಶ್ಲೇಷಣಾ ವರದಿಯಲ್ಲಿ ಮೊಬೈಲ್ ಧ್ವನಿ ಮುದ್ರಣವು ಎದುರುದಾರರ ಧ್ವನಿಯೊಂದಿಗೆ ತಾಳೆಯಾಗಿರುವುದು ಧೃಢಪಟ್ಟಿರುತ್ತದೆ ಹಾಗೂ ರಾಸಾಯನಿಕ ತಜ್ಞರ ಪರೀಕ್ಷಾ ವರದಿಯಲ್ಲಿ ಎದುರುದಾರರಿಂದ ತನಿಖಾಧಿಕಾರಿಗಳು ಸಂಗ್ರಹಿಸಿದ ವಸ್ತುಗಳಲ್ಲಿ ಫಿನಾಫ್ತಲೀನ್ ಅಂಶ ಇರುವುದು ಧೃಢಪಟ್ಟಿರುತ್ತದೆ.

2) ಮೇಲೆ ಹೇಳಿದ ಕಾರಣಕ್ಕಾಗಿ ಎದುರುದಾರರ ಮೇಲೆ ಶಿಸ್ತು ಕ್ರಮಕ್ಕಾಗಿ ಇಲಾಖಾ ವಿಚಾರಣೆ ನಡೆಸಲು ಸಂಬಂಧ ಪಟ್ಟ ಪ್ರಾಧಿಕಾರಕ್ಕೆ ಏಕೆ ಶಿಫಾರಸ್ಸು ಮಾಡಬಾರದು ಎನ್ನುವ ಬಗ್ಗೆ, ಎದುರುದಾರರಿಂದ ಕಾರಣ ಪಡೆಯಲು ಪರಿವೀಕ್ಷಣಾ ಟಿಪ್ಪಣಿಯನ್ನು ಎದುರುದಾರರಿಗೆ ಕಳುಹಿಸಲಾಗಿ, ಎದುರುದಾರರು ಪರಿವೀಕ್ಷಣಾ ಟಿಪ್ಪಣಿಗೆ ತಮ್ಮ ಉತ್ತರವನ್ನು ಸಲ್ಲಿಸಿದ್ದಾರೆ. ಆದರೆ ಎದುರುದಾರರು ನೀಡಿರುವ ಉತ್ತರದಲ್ಲಿ, ಎದುರುದಾರರು ಆಪಾದನೆಗಳನ್ನು ನಿರಾಕರಿಸಿರುವುದರ ಹೊರತಾಗಿ, ಆಪಾದನೆಗಳನ್ನು ಅಲ್ಲಗಳೆಯಲು ಯಾವುದೇ ಪೂರಕ ದಾಖಲಾತಿಗಳನ್ನು ಸಲ್ಲಿಸಿರುವುದಿಲ್ಲ. ಎದುರುದಾರರು ತಮ್ಮ ಸಮಜಾಯಿಷಿಯಲ್ಲಿ "ತನಿಖಾಧಿಕಾರಗಳು ತನ್ನನ್ನು ದಸ್ತಗಿರಿ ಮಾಡುವ ಮೊದಲು ಅಥವಾ ತನ್ನ ವಿರುದ್ಧ ದೂರನ್ನು ದಾಖಲಿಸುವ ಮೊದಲು ದೂರುದಾರರಿಗೆ ಸಂಬಂಧಿಸಿದಂತೆ ತನ್ನ ಬಳಿ ಅವರ ಕೆಲಸ ಬಾಕಿ ಇದೆಯೋ, ಇಲ್ಲವೋ ಎಂಬುದನ್ನು ಮನವರಿಕೆ ಮಾಡಿಕೊಳ್ಳದೆ ತರಾತುರಿಯಲ್ಲಿ ದಾಳಿ ಮಾಡಿ ನನ್ನನ್ನು ಪ್ರಕರಣದಲ್ಲಿ ಸಿಲುಕಿಸಿದ್ದಾರೆ. ದೂರುದಾರರಿಗೆ ಸಂಬಂಧಿಸಿದಂತೆ ಅವರ ತಂದೆ ಸಾವಿನ ನಂತರ ಅವರ ಜಮೀನನ್ನು ಪೌತಿ ಖಾತೆ ಮಾಡುವ ಸಂದರ್ಭದಲ್ಲಿ ದೂರುದಾರರ ಒಡಹುಟ್ಟಿದವರಿಗೆ ಸಂಬಂಧಿಸಿದಂತೆ ಕೆಲವು ಅಸಮರ್ಪಕ ದಾಖಲೆಗಳನ್ನು ನೀಡಿದ್ದರು, ಈ ಕುರಿತು ದೂರುದಾರರಿಗೆ ಸೂಕ್ತ ಅರಿವು ಮೂಡಿಸಿ, ಅಗತ್ಯ ದಾಖಲೆಗಳನ್ನು ಒದಗಿಸಲು ತಿಳಿಸಿದ್ದೆನು. ಆ ನಂತರ ಸೂಕ್ತ ಕಾಲಮಿತಿಯೊಳಗೆ ಪೌತಿ ಖಾತೆಗೆ ಸಂಬಂಧಿಸಿದಂತೆ ನನ್ನ ವ್ಯಾಪ್ತಿಯಲ್ಲಿನ ಕೆಲಸ ಮುಗಿಸಿ ಮುಂದಿನ ಹಂತಕ್ಕೆ ಬೇರೆ ಅಧಿಕಾರಿಗಳಿಗೆ ಕಾಗದ ಪತ್ರಗಳನ್ನು ಕಳುಹಿಸಿಕೊಟ್ಟಿದ್ದು, ತಾಲ್ಲೂಕು ಕಚೇರಿಗೆ ಸಂಬಂಧಪಟ್ಟ ವಿಭಾಗದ ಮುಖ್ಯಸ್ಥರು ದೂರುದಾರರಿಗೆ ಸಂಬಂಧಿಸಿದಂತೆ ಲಭ್ಯವಿರುವ ಎಲ್ಲಾ ದಾಖಲೆಗಳನ್ನು ನೋಡಿ ಪೌತಿ ಖಾತೆಯನ್ನು ಮಾಡಿ ಪಹಣಿಯನ್ನು ಸರ್ಕಾರದ ತಂತ್ರಾಂಶದ ಮೂಲಕ ಅಪ್‌ಡೇಟ್ ಮಾಡಿರುತ್ತಾರೆ. ಆದಾಗ್ಯೂ ದೂರುದಾರರು ಪದೇ ಪದೇ ನನಗೆ ಕರೆ ಮಾಡಿ ಹಣದ ಆಮಿಷ ತೋರಿದರೂ ಕೂಡ ನಾನು ಅದನ್ನು ಬಯಸದೆ ಕಾನೂನು ಚೌಕಟ್ಟಿನಲ್ಲಿಯೇ ಕೆಲಸ ಮಾಡಿಕೊಟ್ಟಿರುತ್ತೇನೆ. ದೂರುದಾರರಿಗೆ ಹಲವು ಅಕ್ಕ, ತಂಗಿ, ಅಣ್ಣಂದಿರಿದ್ದು, ಅವರೆಲ್ಲರ ಕರಾರುವಕ್ಕಾದ ಗುರುತಿನ ಪತ್ರಗಳನ್ನು ಹೊಂದಿಸಿ ತಾಳೆ ಮಾಡಿ ಮುಂದಿನ ಕ್ರಮ ಕೈಗೊಳ್ಳ ಬೇಕಾಗಿದ್ದರಿಂದ ನಾನು ಸೂಕ್ತ ಕಾಗದಪತ್ರಗಳನ್ನು ಒದಗಿಸಲು ದೂಧುದಾರರಿಗೆ ಕೇಳಿರುತ್ತೇನೆ. ಇದರಿಂದ ದೂರುದಾರರು ತನ್ನ ಕೆಲಸ ಮುಗಿಯಲು ತಡವಾಗುತ್ತದೆ ಎಂದು ತಪ್ಪಾಗಿ ಗ್ರಹಿಸಿ ನನ್ನ ವಿರುದ್ಧ ದೂರು ನೀಡಿರುತ್ತಾರೆ. ಅಲ್ಲದೆ ದೂರುದಾರರಿಗೆ ನಾನು ಯಾವುದೇ ಲಂಚದ ಹಣ ಬೇಡಿಕೆ ಇಟ್ಟಿರಲಿಲ್ಲ ಮತ್ತು

ಪಡೆದಿರುವುದಿಲ್ಲ. ದಾಳಿಯ ದಿನ ನನ್ನ ರೂಮಿಗೆ ಬಂದು ದೂರುದಾರರು ನನ್ನ ಟೇಬಲ್ ಮೇಲೆ ಪೇಪರ್ ಒಳಗೆ ಹಣ ಇಟ್ಟಿರುವ ಸಂಗತಿ ಪೋಲೀಸ್ ಅಧಿಕಾರಿಗಳು ಒಳಬಂದು ನನ್ನನ್ನು ಬಂಧಿಸಿದಾಗಲೇ ತಿಳಿದುಬಂದಿದ್ದು, ಈ ರೀತಿ ಒಳಬಂದ ತನಿಖಾಧಿಕಾರಿಗಳು ನನಗೆ ಬಲವಂತ ಮಾಡಿ ಪೇಪರ್ ಒಳಗೆ ಇರುವ ಹಣವನ್ನು ಎತ್ತಿಕೊಡಿ ಎಂದು ಹೇಳಿದರು. ಪೇಪರ್‌ನಲ್ಲಿರುವ ಹಣದ ಸಮೇತ ಅವರಿಗೆ ಎತ್ತಿಕೊಟ್ಟೆನು. ಆ ನಂತರ ನೆರಳು ಸಾಕ್ಷಿಯು ಒಳಗೆ ಬಂದರು, ನಂತರ ಮಹಜರ್ ಜರುಗಿಸಲಾಯಿತು" ಎಂದು ಮುಂತಾಗಿ ಸಮಜಾಯಿಷಿಯನ್ನು ನೀಡಿರುತ್ತಾರೆ. ಎದುರುದಾರರು ತಮ್ಮ ಉತ್ತರದಲ್ಲಿ ತಿಳಿಸಿರುವಂತೆ ಅವರು ಫಿರ್ಯಾದುದಾರರಿಗೆ ಸಮರ್ಪಕ ದಾಖಲೆಗಳನ್ನು ಸಲ್ಲಿಸುವಂತೆ ಸೂಚಿಸಿದ್ದರೆನ್ನಲಾದ ಬಗ್ಗೆ ಯಾವುದೇ ಪೂರಕ ದಾಖಲಾತಿಗಳನ್ನು ಸಲ್ಲಿಸಿರುವುದಿಲ್ಲ. ನಂತರ ಅವರು ಫಿರ್ಯಾದುದಾರರ ಕೆಲಸವನ್ನು ಮುಗಿಸಿ, ಕಡತವನ್ನು ಮೇಲಾಧಿಕಾರಿಗಳವರಲ್ಲಿ ಸಲ್ಲಿಸಿರುವ ಬಗ್ಗೆ ಸಹಾ ಯಾವುದೇ ಪೂರಕ ದಾಖಲಾತಿಗಳನ್ನು ಸಲ್ಲಿಸಿರುವುದಿಲ್ಲ. ಎದುರುದಾರರು ಫಿರ್ಯಾದುದಾರರಿಂದ ಲಂಚದ ಹಣವನ್ನು ಕೇಳಿ ಪಡೆದುಕೊಂಡ ಬಗ್ಗೆ ಪಂಚರ ಸಾಕ್ಷ್ಯ ಮತ್ತು ಇತರೆ ಸಾಂಧರ್ಭಿಕ ಸಾಕ್ಷ್ಯಾಧಾರಗಳಿಂದ ಮೇಲ್ನೋಟಕ್ಕೆ ಧೃಢಪಟ್ಟಿರುತ್ತದೆ. ಟ್ರ್ಯಾಪ್ ಪೂರ್ವದಲ್ಲಿ ಎದುರುದಾರರು ಫಿರ್ಯಾದುದಾರರಿಂದ ಲಂಚದ ಹಣವನ್ನು ಕೇಳಿರುವ ಬಗ್ಗೆ, ವಾಯ್ಸ್ ರೆಕಾರ್ಡ್‌ನಲ್ಲಿ ಅಡಕವಾಗಿರುವ ಅವರ ಧ್ವನಿಯಿಂದ ಧೃಢಪಟ್ಟಿರುತ್ತದೆ. ಮುಂದುವರೆದು, ಫಿರ್ಯಾದುದಾರ ಮತ್ತು ಪಂಚಸಾಕ್ಷಿಯ ಸಾಕ್ಷದ ಮೇಲಿಂದ ಎದುರುದಾರರು ಫಿರ್ಯಾದುದಾರರಿಂದ ಲಂಚದ ಹಣವನ್ನು ಕೇಳಿ ಪಡೆದುಕೊಂಡು ನಂತರ ಅವರೇ ತಮ್ಮ ಬಳಿ ಇದ್ದ ಒಂದು ಬಿಳಿ ಪೇಪರ್‌ನಲ್ಲಿ ಹಣವನ್ನು ಸುತ್ತಿ ಟೇಬಲ್ ಮೇಲೆ ಇಟ್ಟಿರುವುದು ಮೇಲ್ನೋಟಕ್ಕೆ ಕಂಡುಬರುತ್ತದೆ. ಈ ಮೇಲ್ಕಂಡ ಕಾರಣಗಳಿಂದ ಎದುರುದಾರರು ಸಲ್ಲಿಸಿರುವ ಸಮಜಾಯಿಷಿಯಲ್ಲಿನ ವಿವರಗಳನ್ನು ಒಪ್ಪಲು ಯಾವುದೇ ಸಕಾರಣಗಳು ಇರುವುದಿಲ್ಲ ಮತ್ತು ಅವರ ವಿರುದ್ಧದ ನಡವಳಿಯನ್ನು ಕೈ ಬಿಡಲು ಸೂಕ್ತ/ಸಮಂಜಸ/ಸಮಾಧಾನಕರ ಕಾರಣ ತೋರಿಸಿಲ್ಲವೆಂಬ ಅಭಿಪ್ರಾಯಕ್ಕೆ ಬರಲಾಗಿದೆ.

3) ಕಡತದಲ್ಲಿಯ ಸಂಗತಿಗಳು ಹಾಗೂ ದಾಖಲಾತಿಗಳಿಂದ, ದೂರುದಾರರ ತಂದೆಯ ಹೆಸರಿನಲ್ಲಿದ್ದ ಬೆಸ್ತಮಾರನಹಳ್ಳಿ ಗ್ರಾಮದ ಸರ್ವೆ.ನಂ.167/04ರ 12-ಗುಂಟೆ ಖುಷ್ಕಿ ಜಮೀನಿನ ಪೌತಿ ಖಾತೆಯನ್ನು ಫಿರ್ಯಾದುದಾರರ ಹೆಸರಿಗೆ ಮಾಡಿಕೊಡಲು ಎದುರುದಾರರು ರೂ.15,000/-ಗಳ ಲಂಚದ ಹಣಕ್ಕೆ ಬೇಡಿಕೆ ಇಟ್ಟು, ನಂತರ ರೂ.10,000/-ಗಳಿಗೆ ಬೇಡಿಕೆ ಇಟ್ಟು, ದಿನಾಂಕ:23/11/2016ರಂದು ಎದುರುದಾರರು ರೂ.10,000/-ಗಳ ಲಂಚದ ಹಣವನ್ನು ಫಿರ್ಯಾದುದಾರರಿಂದ ಪಡೆದುಕೊಂಡು ತನ್ಮೂಲಕ ಎದುರುದಾರರು ಸರ್ಕಾರಿ/ಸಾರ್ವಜನಿಕ ನೌಕರರಾಗಿ ಪರಿಪೂರ್ಣ ಪ್ರಾಮಾಣಿಕತೆ, ಸಂಪೂರ್ಣ ಕರ್ತವ್ಯ ನಿಷ್ಠೆ ಮತ್ತು ಸರ್ಕಾರಿ ಸೇವಕರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡು ಕರ್ನಾಟಕ ನಾಗರೀಕ

ಸೇವಾ (ನಡತೆ) ನಿಯಮಾವಳಿ, 1966ರ ನಿಯಮ 3(1) ರ ಅಡಿಯಲ್ಲಿ ದುರ್ವತನೆ/ದುರ್ನಡತೆ ಎಸಗಿರುವುದು ಮೇಲ್ನೋಟಕ್ಕೆ ಕಂಡುಬರುತ್ತದೆ.

4) ಆದುದರಿಂದ ಎದುರುದಾರರ ವಿರುದ್ಧ ಇಲಾಖಾ ಶಿಸ್ತು ಕ್ರಮ ಕೈಗೊಳ್ಳಲು ಕರ್ನಾಟಕ ಲೋಕಾಯುಕ್ತ ಕಾಯಿದೆ, 1984 ಕಲಂ 12(3) ರ ಅಡಿ ಪ್ರದತ್ತವಾದ ಅಧಿಕಾರದಡಿ, ಈಗ ಈ ವರದಿ ಮೂಲಕ ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗುತ್ತಿದೆ ಹಾಗೂ ಎದುರುದಾರರ ವಿರುದ್ಧದ ಇಲಾಖಾ ವಿಚಾರಣೆ ಮಾಡಲು, ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ 1957ರ ನಿಯಮ 14(ಎ)ರಡಿ ಈ ಸಂಸ್ಥೆಗೆ ವಹಿಸಬೇಕೆಂದು ಕೋರಿದೆ.

5) ಹಾಗೆಯೇ ಕರ್ನಾಟಕ ಲೋಕಾಯುಕ್ತ ಕಾಯಿದೆ, 1984 ಕಲಂ 12(4) ರ ಪ್ರಕಾರ ಸಕ್ಷಮ ಪ್ರಾಧಿಕಾರವು, ಈ ವರದಿಯ ಮೇಲೆ ಏನು ಕ್ರಮ ಕೈಗೊಂಡಿದೆ ಅಥವಾ ಏನು ಕ್ರಮ ಕೈಗೊಳ್ಳಲಾಗುತ್ತದೆ ಎಂಬುದರ ಬಗ್ಗೆ ಈ ವರದಿಯನ್ನು ಸ್ವೀಕರಿಸಿದ **ಮೂರು ತಿಂಗಳೊಳಗೆ** ಈ ಪ್ರಾಧಿಕಾರಕ್ಕೆ ತಿಳಿಸಲು ಹೇಳಿದೆ.

4/11/24

**(ನ್ಯಾಯಮೂರ್ತಿ ಬಿ.ಎಸ್. ಪಾಟೀಲ್)**
**ಉಪಲೋಕಾಯುಕ್ತರು,**
**ಕರ್ನಾಟಕ ರಾಜ್ಯ, ಬೆಂಗಳೂರು.**